ಕರ್ನಾಟಕ ಸರ್ಕಾರ

# ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ.



## ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅವರಣದಲ್ಲಿ

ಮೂರು ವರ್ಷದ ಅವಧಿಗೆ (2020-2021) ನೇ ಸಾಲಿನಿಂದ ದ್ವಿ ಚಕ್ರ/ತ್ರಿ ಚಕ್ರ/ನಾಲ್ಕು ಚಕ್ರ ಹಾಗೂ ಇತರೆ ವಾಹನಗಳ ಪಾರ್ಕಿಂಗ್ ನಿರ್ವಹಣೆಗೆ ಗುತ್ತಿಗೆ ನೀಡಲು ದ್ವಿ-ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಿರುವ ಟೆಂಡರ್

<u>ಟೆಂಡರ್‌ನ ಅಂದಾಜು ಮೊತ್ತ ರೂ: 471600-00</u>

<u>ಇ.ಎಂ.ಡಿ ಮೊತ್ತ ರೂ: 12000-00</u>

ಕರ್ನಾಟಕ ಸರ್ಕಾರ

# ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,

# ಶಿವಮೊಗ್ಗ-577201

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ

ವಾಹನ ನಿಲ್ದಾಣದ ನಿರ್ವಹಣೆಗಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್

(ದ್ವಿ ಚಕ್ರ/ತ್ರಿ ಚಕ್ರ/ನಾಲ್ಕು ಚಕ್ರ ಹಾಗೂ ಇತರೆ ವಾಹನಗಳ)

**1. ಪೀಠಿಕೆ:**

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗವು 64 ಎಕರೆ ಭೂಮಿಯಲ್ಲಿ 2005 ರಲ್ಲಿ ಪ್ರಾರಂಭವಾಯಿತು. ಪ್ರಸ್ತುತ ಸಿಮ್ಸ್ ಸಂಸ್ಥೆಯು 150 ವೈದ್ಯಕೀಯ ವಿದ್ಯಾರ್ಥಿಗಳ ದಾಖಲಾತಿಯ ಸಾಮರ್ಥ್ಯ ಹೊಂದಿರುತ್ತದೆ. ಸದರಿ ಸಿಮ್ಸ್ ಆವರಣದಲ್ಲಿ 1880 ರ ಅವಧಿಯಲ್ಲಿ ಬ್ರಿಟಿಷ್ ಆಡಳಿತಾಧಿಕಾರಿ ನಿರ್ಮಿಸಿದ ಮೆಗ್ಗಾನ್ ಆಸ್ಪತ್ರೆ ಮತ್ತು 1991-92 ರ ಅವಧಿಯಲ್ಲಿ 367 ಹಾಸಿಗೆಗಳ ಸಾಮರ್ಥ್ಯವಿರುವ ಆಸ್ಪತ್ರೆಯನ್ನು ನಿರ್ಮಿಸಲಾಗಿರುತ್ತದೆ, ಸದರಿ ಆಸ್ಪತ್ರೆಯು ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನಕ್ಕೆ ಬಂದ ಮೇಲೆ ಇದನ್ನು ಉನ್ನತೀಕರಿಸಿ 950 ಹಾಸಿಗೆಯುಳ್ಳ ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆ ನಿರ್ಮಿಸಲಾಗಿರುತ್ತದೆ, ಜೊತಗೆ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆ, ಬಾಲಕರ ಹಾಗೂ ಬಾಲಕಿಯರ ಮತ್ತು ವೈದ್ಯರ ವಸತಿ ಗೃಹಗಳು ಸಿಮ್ಸ್ ಆವರಣದಲ್ಲಿರುತ್ತವೆ.

**2. ವಾಹನಗಳ ಪಾರ್ಕಿಂಗ್ ಟೆಂಡರ್ ಕರೆಯುವ ಉದ್ದೇಶ:-**

ಸಿಮ್ಸ್ ಆವರಣದಲ್ಲಿರುವ ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆ, ಸೂಪರ್ ಸ್ಪೇಷಾಲಿಟಿ (ಕೋವಿಡ್-19 ಆಸ್ಪತ್ರೆ) ಆಸ್ಪತ್ರೆ, ಮಕ್ಕಳ ವಿಭಾಗ ಮತ್ತು ಸ್ತ್ರಿ ಮತ್ತು ಪ್ರಸೂತಿ ವಿಭಾಗಕ್ಕೆ ಪ್ರತಿ ನಿತ್ಯ ನೂರಾರು ರೋಗಿಗಳು ಹಾಗೂ ರೋಗಿಗಳ ಸಹಚರರು ಸಾಕಷ್ಟು ವಾಹನಗಳೊಂದಿಗೆ ಚಿಕಿತ್ಸೆಗೆಂದು ಬರುತ್ತಿದ್ದು, ಚಿಕಿತ್ಸೆಗೆಂದು ಬರುವ ರೋಗಿಗಳು ಹಾಗೂ ರೋಗಿಗಳ ಸಂಬಂಧಿಕರು ತಮ್ಮ ವಾಹನಗಳನ್ನು ಆಸ್ಪತ್ರೆಯ ಆವರಣದಲ್ಲಿ ಕ್ರಮಬದ್ದವಾಗಿ ನಿಲುಗಡೆ ಮಾಡದಿರುವ ಕಾರಣ ತುರ್ತು ಚಿಕಿತ್ಸೆಗೆಂದು ಬರುವ ರೋಗಿಗಳಿಗೆ ಸರಿಯಾದ ಸಮಕ್ಕೆ ಚಿಕಿತ್ಸೆ ಸಿಗದೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ದ್ವಿಚಕ್ರ/ತ್ರಿಚಕ್ರ/ಕಾರುಗಳು/ಇತರೆ ವಾಹನಗಳನ್ನು ಆಸ್ಪತ್ರೆಯ ಆವರಣದಲ್ಲಿ ವ್ಯವಸ್ಥಿತವಾಗಿ, ಸುರಕ್ಷಿತವಾಗಿ ಹಾಗೂ ಕ್ರಮಬದ್ದವಾಗಿ ನಿಲುಗಡೆ ಮಾಡುವ ಸಲುವಾಗಿ ಪಾರ್ಕಿಂಗ್ ವ್ಯವಸ್ಥೆಗಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲು ಉದ್ದೇಶಿಸಲಾಗಿದೆ.

**ಅ) ನಿಗದಿಪಡಿಸಿರುವ ವಾಹನಗಳ ಪಾರ್ಕಿಂಗ್ ಸ್ಥಳಗಳು:**

ಅ) ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆ ಮುಂಭಾಗ

ಆ) ತುರ್ತು ಚಿಕಿತ್ಸಾ ವಿಭಾಗ ಮತ್ತು ಸೂಪರ್ ಸ್ಪೆಷಾಲಿಟಿ ಮದ್ಯದಲ್ಲಿರುವ ಖಾಲಿ ಜಾಗದಲ್ಲಿ

ಇ) ಮಕ್ಕಳ ವಿಭಾಗದ ಮುಂಭಾಗ

ಈ) ಸ್ತ್ರಿ ಮತ್ತು ಪ್ರಸೂತಿ ವಿಭಾಗ ಮುಂಭಾಗ

| ಕ್ರ ಸಂ | ವಾಹನಗಳ ವಿವರ | ಸದರಿ ಸ್ಥಳಗಳಿಗೆ ಪ್ರತಿನಿತ್ಯ ಪ್ರವೇಶಿಸುವ ಅಂದಾಜು ವಾಹನಗಳ ಸಂಖ್ಯೆ | | | | |
|---|---|---|---|---|---|---|
| | | ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆ ಮುಂಭಾಗ | ತುರ್ತು ಚಿಕಿತ್ಸಾ ವಿಭಾಗ ಮತ್ತು ಸೂಪರ್ ಸ್ಪೆಷಾಲಿಟಿ ಮಧ್ಯದಲ್ಲಿರುವ ಖಾಲಿ ಜಾಗದಲ್ಲಿ | ಮಕ್ಕಳ ವಿಭಾಗದ ಮುಂಭಾಗ | ಸ್ತ್ರೀ ಮತ್ತು ಪ್ರಸೂತಿ ವಿಭಾಗ ಮುಂಭಾಗ | ಅಂದಾಜು ಒಟ್ಟು ವಾಹನಗಳು |
| 1 | ದ್ವಿ ಚಕ್ರ | 25 | 50 | 25 | 50 | **150** |
| 2 | ತ್ರಿ ಚಕ್ರ / ನಾಲ್ಕು ಚಕ್ರ | 5 | 20 | 5 | 20 | **50** |
| 3 | ಲಘು ವಾಣಿಜ್ಯ ವಾಹನ | 2 | 2 | 0 | 0 | **4** |

**ಆ) ಈ ಕೆಳಕಂಡಂತೆ ವಾಹನವಾರು ನಿಗದಿಪಡಿಸಿದ ಶುಲ್ಕಗಳ ವಿವರ :**

| ಕ್ರ ಸಂ | ವಾಹನಗಳ ವಿವರ | ವಾಹನ ಪಾರ್ಕಿಂಗ್ ಫೀ ಪ್ರತಿ ಮೊದಲ 12 ಗಂಟೆಯವರೆಗೆ | ವಾಹನ ಪಾರ್ಕಿಂಗ್ ಫೀ ಪ್ರತಿ ಮೊದಲ 12 ಗಂಟೆಯ ನಂತರ | ವಾಹನ ಪಾರ್ಕಿಂಗ್ ಫೀ ಒಂದು ದಿನಕ್ಕೆ |
|---|---|---|---|---|
| 1 | ದ್ವಿ ಚಕ್ರ | Rs.5.00 | Rs. 10.00 | Rs.10.00 |
| 2 | ತ್ರಿ ಚಕ್ರ / ನಾಲ್ಕು ಚಕ್ರ | Rs. 10.00 | Rs. 20.00 | Rs.20.00 |
| 3 | ಲಘು ವಾಣಿಜ್ಯ ವಾಹನ | Rs.15.00 | Rs. 30.00 | Rs. 30.00 |

**3. ಟೆಂಡರ್‌ದಾರರ ಅರ್ಹತೆಗಳು:**

ಅ) ಟೆಂಡರ್‌ದಾರರು ಈ ಕೆಳಕಂಡ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸಬೇಕು.

i. ID Proof with Photo.

ii. Proof of Address.

Iii.PAN Card

iv. GST Registration Certificate in case of registered (Optional).

v. Experience Certificate if any (Optional).

ಆ) ಟೆಂಡರ್‌ದಾರರು ಸಲ್ಲಿಸಿರುವ ದಾಖಲಾತಿಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ಅವಶ್ಯವೆಂದು ಕಂಡುಬಂದಲ್ಲಿ ಕಛೇರಿಗೆ ಹಾಜರುಪಡಿಸಬೇಕು. ಒಂದು ವೇಳೆ ಯಾವುದೇ ದಾಖಲೆ ಸುಳ್ಳು ಎಂದು ಕಂಡುಬಂದರೆ ಟೆಂಡರ್‌ನ್ನು ತಿರಸ್ಕರಿಸಿ ಇ.ಎಂ.ಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಇ) ಟೆಂಡರ್‌ದಾರರು ಯಾವುದೇ ಕಾನೂನಿನ ಅಡಿಯಲ್ಲಿ ಅವ್ಯವಹಾರಗಳ ಬಗ್ಗೆ ಅನರ್ಹರೆಂದು ಪರಿಗಣಿಸಿರಬಾರದು. ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳ ಬಗ್ಗೆ ವಿವರಗಳನ್ನು ಈ ಟೆಂಡರ್‌ನ ದಸ್ತಾವೇಜು ದಾಖಲೆಗಳಲ್ಲಿ ಟೆಂಡರ್‌ದಾರರಿಗೆ ನೀಡಿದೆ. ಈ ಬಗ್ಗೆ ಯಾವುದೇ ವಿಷಯಗಳ ಬಗ್ಗೆ ಸ್ಪಷ್ಟೀಕರಣದ ವಿಷಯವನ್ನು ಲಿಖಿತವಾಗಿ ನೀಡಿ ಟೆಂಡರ್ ಕರೆದಿರುವ ಪ್ರಾಧಿಕಾರದಿಂದ ಮಾಹಿತಿ ಪಡೆಯಬಹುದು.

## 4. ಟೆಂಡರ್ ಷರತ್ತುಗಳು ಮತ್ತು ನಿಬಂಧನೆಗಳು :

1. ಟೆಂಡರಿನಲ್ಲಿ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ವಾಹನ ನಿಲುಗಡೆಯ ನಿರ್ವಹಣೆಗಾಗಿ ದರಗಳನ್ನು ನಮೂದಿಸತಕ್ಕದ್ದು.
2. **ಟೆಂಡರ್‌ನಲ್ಲಿ ಭಾಗವಹಿಸುವ ಸಂಸ್ಥೆಗಳ ಪೈಕಿ ಕನಿಷ್ಠ 4.0 ಲಕ್ಷ (ನಾಲ್ಕು ಲಕ್ಷದ) ಮತ್ತು ಹೆಚ್ಚಿಗೆ ಮೊತ್ತವನ್ನು ನಮೂದಿಸುವ ಸಂಸ್ಥೆಯನ್ನು ಪರಿಗಣಿಸಲಾಗುವುದು.**
3. ಪ್ರಾರಂಭಿಕ ಭದ್ರತಾ ಠೇವಣಿಯಾಗಿ ದರಖಾಸ್ತು ಮೌಲ್ಯದ ಶತಾಂಶ 10 ರಷ್ಟು ( ರೂ. **47160/-)** ಹಣವನ್ನು ನಿರ್ದೇಶಕರು, ಸಿಮ್ಸ್ ಶಿವಮೊಗ್ಗ ಈ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ. ಯನ್ನು ಕಾರ್ಯಾದೇಶ ಪಡೆದ ಏಳು(7) ದಿನಗಳ ಒಳಗಾಗಿ ಕಛೇರಿಗೆ ನೀಡುವುದು. ಲಗತ್ತಿಸುವುದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ಇ.ಎಂ.ಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು
4. ಈ ಪ್ರಾರಂಭಿಕ ಠೇವಣಿಯನ್ನು ದರಖಾಸ್ತುಗಳನ್ನು ಒಪ್ಪದಿದ್ದ ಪಕ್ಷದಲ್ಲಿ ಗುತ್ತಿಗೆದಾರರಿಗೆ ಮರು ಪಾವತಿ ಮಾಡಲಾಗುವುದು. ದರಖಾಸ್ತನ್ನು ಒಪ್ಪಿರುವ ಗುತ್ತಿಗೆದಾರರಿಗೆ ಅವರ ಗುತ್ತಿಗೆ ವಾಯಿದೆ ಮುಗಿದ ನಂತರ ಮರುಪಾವತಿ ಮಾಡಲಾಗುವುದು.
5. ಹೆಚ್ಚಿನ ಮೌಲ್ಯದ ದರಖಾಸ್ತು ಮಾತ್ರ ಒಪ್ಪಿಗೆಗೆ ಪರಿಗಣಿಸಲಾಗುವುದು. ಆದರೆ ಯಾವ ದರಖಾಸ್ತನ್ನಾಗಲಿ ಒಪ್ಪುವುದು ಅಥವಾ ಒಪ್ಪದಿರುವುದು ನಿರ್ದೇಶಕರ ಸಿಮ್ಸ್ ಇವರ ಅಂತಿಮ ತಿರ್ಮಾನಕ್ಕೆ ಬಿಟ್ಟಿರುತ್ತದೆ. ಈ ತೀರ್ಮಾನವನ್ನು ಯಾರು ಪ್ರಶ್ನಿಸಲಾಗದು.
6. ದರಪಟ್ಟಿಯ ನಡವಳಿಗಳು ಮುಗಿದ ತಕ್ಷಣ ಎಲ್ಲರಿಗಿಂತ ಹೆಚ್ಚಿನ ಮೌಲ್ಯವನ್ನು ನಮೂದಿಸಿರುವ ಗುತ್ತಿಗೆದಾರನು ಕಾರ್ಯಾದೇಶ ಪಡೆದ ಏಳು(7) ದಿನಗಳ ಒಳಗಾಗಿ ದರಖಾಸ್ತು ಮೌಲ್ಯದ ಶತಾಂಶ 25% ರಷ್ಟು ನಿರ್ದೇಶಕರು, ಸಿಮ್ಸ್, ಶಿವಮೊಗ್ಗ ಈ ಹೆಸರಿನಲ್ಲಿ ಡಿ.ಡಿ. ಅಥವಾ ಹಣವನ್ನು ಪಾವತಿ ಮಾಡಿ ರಶೀದಿ ಪಡೆಯತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ಮೌಲ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು ಹಾಗೂ ಮರುದರಖಾಸ್ತನಿಂದ ಆಗತಕ್ಕ ನಷ್ಟವನ್ನು ಸಹ ವಸೂಲಿ ಮಾಡಲಾಗುವುದು. ಬಾಕಿ ಉಳಿದ ಶತಾಂಶ 75% ಭಾಗ ಹಣ ವನ್ನು ಡಿ.ಡಿ ಮೂಲಕ ಅಥವಾ ನಗದಾಗಿ ಈ ಕಛೇರಿಯಲ್ಲಿ ಕಾರ್ಯಾದೇಶ ಪಡೆದ 6 ತಿಂಗಳೊಳಾಗಾಗಿ ಪಾವತಿ ಮಾಡಿ ರಶೀದಿ ಪಡೆಯತಕ್ಕದ್ದು ಹಾಗೂ ಈ ಹಣವನ್ನು ಕಂತುಗಳಲ್ಲಿ ಪಾವತಿ ಮಾಡತಕ್ಕದಲ್ಲ.
7. ಗುತ್ತಿಗೆದಾರನು ಶತಾಂಶ 75% ಭಾಗ ಹಣವನ್ನು ನಿಗದಿತ ವಾಯಿದೆಯಲ್ಲಿ ಪಾವತಿಮಾಡದಿದ್ದಲ್ಲಿ, ಸದರಿ ಗುತ್ತಿಗೆದಾರನ ಪ್ರಾರಂಭಿಕ ಠೇವಣಿ ಹಣದೊಂದಿಗೆ ದರಖಾಸ್ತು ಸ್ವೀಕರಿಸಿದ ದಿನ ದರಖಾಸ್ತು ಮೌಲ್ಯದ ಶತಾಂಶ 25% ಭಾಗದಷ್ಟು ಪಾವತಿ ಮಾಡಿರುವ ಹಣವನ್ನು, ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಮರು ದರಖಾಸ್ತಿನಿಂದ ಸರ್ಕಾರಕ್ಕೆ ಆಗತಕ್ಕ ನಷ್ಟವನ್ನು ಗುತ್ತಿಗೆದಾರನಿಂದ ವಸೂಲು ಮಾಡಲಾಗುವುದು.
8. ಗುತ್ತಿಗೆದಾರನು ತನ್ನ ಪರವಾಗಿ ತನ್ನ ಪ್ರತಿನಿಧಿಯಾಗಿ ಬೇರೆ ಯಾರನ್ನು ವಾಹನಗಳ ಪಾರ್ಕಿಂಗ್ ನಿರ್ವಹಣೆಯ ಹಕ್ಕನ್ನು ನಡೆಸಲು ನೇಮಿಸತಕ್ಕದ್ದಲ್ಲ. ಹಾಗು ಗುತ್ತಿಗೆಯನ್ನು ಬಾಡಿಗೆಗೆ ಕೊಡತಕ್ಕದ್ದಲ್ಲ.
9. ಸಂಸ್ಥೆಯ ವೈದ್ಯರು/ಅಧಿಕಾರಿಗಳು, ನೌಕರರ ವಾಹನಗಳಿಗೆ ಪ್ರತ್ಯೇಕ ಸ್ಥಳಾವಕಾಶವಿದ್ದು, ಅವರಿಂದ ಗುತ್ತಿಗೆದಾರರು ಯಾವ ಶುಲ್ಕವನ್ನು ವಸೂಲು ಮಾಡತಕ್ಕದ್ದಲ್ಲ. ಇದಕ್ಕಾಗಿ ಆಸ್ಪತ್ರೆ ನೌಕರರಿಗೆ ಗುತ್ತಿಗೆದಾರನ ಖರ್ಚಿನಲ್ಲಿ ಗುರುತಿನ ಬಿಲ್ಲೆಗಳನ್ನು ಮಾಡಿಸಿ ಸಿಮ್ಸ್ ಆಡಳಿತ ಕಛೇರಿಗೆ ನೀಡಬೇಕು, ಟೆಂಡರ್‌ದಾರರೇ ನೇರವಾಗಿ ವೈದ್ಯರು/ಅಧಿಕಾರಿಗಳು, ನೌಕರರಿಗೆ ನೀಡತಕ್ಕದ್ದಲ್ಲ. ಹಾಗೂ ಸಾರ್ವಜನಿಕರಿಗೆ ಗುರುತಿನ ಬಿಲ್ಲೆಗಳನ್ನು ಕೊಡತಕ್ಕದು.
10. ವಾಹನ ನಿಲ್ದಾಣದಲ್ಲಿ ವಾಹನಗಳು ಅಥವಾ ಬಿಡಿಭಾಗಗಳು ಕಳುವಾದಲ್ಲಿ ನಷ್ಟಕ್ಕೆ ಗುತ್ತಿಗೆದಾರನೇ ಜವಬ್ದಾರನಾಗಿರುತ್ತಾನೆಯೇ ಹೊರತು ಆಸ್ಪತ್ರೆಯ ಅಧಿಕಾರಿಗಳಾಗಲಿ ಅಥವಾ ಸಿಬ್ಬಂದಿಗಳಾಗಲಿ ಜವಾಬ್ದಾರರಲ್ಲ. ಸದರಿ ನಷ್ಟವನ್ನು ಮಾಲಿಕರಿಗೆ ಗುತ್ತಿಗೆದಾರನೇ ತುಂಬಿಕೊಡಬೇಕು. ವಾಹನಗಳನ್ನು ಅತೀ ಜಾಗರೂಕತೆಯಿಂದ

ನೋಡಿಕೊಳ್ಳತಕ್ಕದ್ದು ಕಳ್ಳತನವಾದ ವಾಹನ/ಸೈಕಲ್‌ಗಳ ಪರಿಹಾರದ ಮೊತ್ತ ಒಂದು ವಾರದ ಒಳಗೆ ಗುತ್ತಿಗೆದಾರರೆ ಕೊಡತಕ್ಕದು.

11. ಗುತ್ತಿಗೆದಾರನೇ ವಾಹನ ನಿಲ್ದಾಣದಲ್ಲಿ ಮುಖ್ಯವಾದ ಸ್ಥಳದಲ್ಲಿ ವಾಹನವಾರು ನಿಗದಿಪಡಿಸಿದ ಶುಲ್ಕಗಳ ವಿವರವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸೂಚನ ಫಲಕದಲ್ಲಿ ಪ್ರಚುರಪಡಿಸತಕ್ಕದ್ದು. ದರ ಗುತ್ತಿಗೆ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅಥವಾ ನಿಗದಿಪಡಿಸಿದ ಶುಲ್ಕಗಳಿಗಿಂತ ಹೆಚ್ಚಿನ ಶುಲ್ಕವನ್ನು ವಸೂಲು ಮಾಡಿದ ಪಕ್ಷದಲ್ಲಿ ಗುತ್ತಿಗೆಯನ್ನು ನಿರ್ದೇಶಕರು ಸಿಮ್ಸ್ ಇವರು ಗುತ್ತಿಗೆದಾರನ ತಿಳುವಳಿಕೆ ಇಲ್ಲದೇ ತಕ್ಷಣ ವಜಾ ಮಾಡಿ ಗುತ್ತಿಗೆದಾರನು ಪಾವತಿ ಮಾಡಿರುವ ಪ್ರಾರಂಭಿಕ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ವಾಹನ ನಿಲ್ದಾಣವನ್ನು ಸಂಸ್ಥೆಯ ವಶಕ್ಕೆ ತೆಗೆದು ಕೊಳ್ಳಲಾಗುವುದು. **ನಿರ್ದೇಶಕರು ಸಿಮ್ಸ್ ಇವರ ಈ ಹಕ್ಕನ್ನು ಯಾರು ಪ್ರಶ್ನಿಸುವಂತಿಲ್ಲ.**

12. ಗುತ್ತಿಗೆದಾರನಿಗೆ ಸಿಮ್ಸ್ ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆಯ ಅವರಣದಲ್ಲಿ ಈ ಕೆಳಕಂಡಂತೆ ನಿಗದಿಪಡಿಸಿದ ಜಾಗದಲ್ಲಿ ಮಾತ್ರ ವಾಹನಗಳನ್ನು ನಿಲ್ಲಿಸಲು ಅನುವು ಮಾಡಿಕೊಡಬೇಕು. ಈ ಸ್ಥಳದ ವಿನಃ ಬೇರೆ ಸ್ಥಳವನ್ನು ವಾಹನಗಳನ್ನು ನಿಲ್ಲಿಸಲು ಉಪಯೋಗಿಸಬಾರದು ಹಾಗೂ ಎಲ್ಲೆಂದರಲ್ಲಿ ಅಡ್ಡಾ ದಿಡ್ಡಿಯಾಗಿ ವಾಹನಗಳನ್ನು ನಿಲುಗಡೆ ಮಾಡದಂತೆ ಹಾಗೂ ಆಸ್ಪತ್ರೆಯ ಎದುರುಗಡೆ ವಾಹನಗಳನ್ನು ನಿಲ್ಲಿಸದಂತೆ ನೋಡಿಕೊಳ್ಳತಕ್ಕದ್ದು.

    ಅ) ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆ ಮುಂಭಾಗ
    ಆ) ತುರ್ತು ಚಿಕಿತ್ಸಾ ವಿಭಾಗ ಮತ್ತು ಸೂಪರ್ ಸ್ಪೆಷಾಲಿಟಿ ಮಧ್ಯದಲ್ಲಿರುವ ಖಾಲಿ ಜಾಗದಲ್ಲಿ
    ಇ) ಮಕ್ಕಳ ವಿಭಾಗದ ಮುಂಭಾಗ
    ಈ) ಸ್ತ್ರೀ ಮತ್ತು ಪ್ರಸೂತಿ ವಿಭಾಗ ಮುಂಭಾಗ

13. ಗುತ್ತಿಗೆದಾರನು ರೋಗಿಗಳ ಮತ್ತು ಅವರ ಅನುಚರರ ಹಾಗೂ ಸಂದರ್ಶಕರ ವಾಹನಗಳನ್ನು ಮಾತ್ರ ನಿಲ್ಲಿಸಲು ಅನುಮತಿಸಬೇಕೇ ಹೊರತು ಹೊರಗಿನವರ ವಾಹನಗಳನ್ನು ಅಥವಾ ಸಂಶಯಾಸ್ಪದವಾದ ವಾಹನಗಳನ್ನು ನಿಲ್ದಾಣದಲ್ಲಿ ನಿಲ್ಲಿಸಲು ಅನುಮತಿಸಬಾರದು ಒಂದು ಪಕ್ಷ ಹೊರಗಿನ ವಾಹನ ಕಂಡು ಬಂದಲ್ಲಿ ಒಂದು ಬಾರಿಗೆ ರೂ 200/- ರಂತೆ ದಂಡ ವಸೂಲು ಮಾಡಲಾಗುವುದು ಹಾಗೂ ಹತ್ತಕ್ಕಿಂತ ಹೆಚ್ಚು ಬಾರಿ ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

14. ದಿನದ 24 ಗಂಟೆಯು ನಿಲ್ದಾಣದಲ್ಲಿರುವ ವಾಹನಗಳ ಜವಾಬ್ದಾರಿ ನಿಮ್ಮದಾಗಿದ್ದು ಅದಕ್ಕಾಗಿ ಸಿಬ್ಬಂದಿಯನ್ನು ನೇಮಿಸಿಕೊಂಡಿರತಕ್ಕದ್ದು. ಹಾಗೂ ತಮ್ಮ ಸ್ವಂತ ಖರ್ಚಿನಿಂದ ಸಿ.ಸಿ.ಟಿವಿಗಳನ್ನು ಕಡ್ಡಾಯವಾಗಿ ಅಳವಡಿಸಬೇಕು ಮತ್ತು ಅದರ ಫುಟೇಜ್ ರೆಕಾರ್ಡ್ ಕನಿಷ್ಠ ಒಂದು ವಾರ ಛಾಯ ಪ್ರತಿ ದಾಖಲು ವ್ಯವಸ್ಥೆ ಮಾಡಬೇಕು.

15. ವಾಹನ ನಿಲ್ದಾಣದ ನಿರ್ವಹಣೆಗೆ ನೇಮಿಸಿಕೊಳ್ಳುವ ವ್ಯಕ್ತಿಗಳಿಗೆ ಕನಿಷ್ಠ 18 ವರ್ಷ ತುಂಬಿರಬೇಕು ಹಾಗೂ ಸಂಬಳ, ಭತ್ಯೆ, ಪಿ.ಎಫ್, ಇ.ಎಸ್.ಐ ಮುಂತಾದ ಸೌಲಭ್ಯಗಳನ್ನು ಟೆಂಡರ್‌ದಾರರೆ ನೀಡಬೇಕು ಮತ್ತು ಸಿಬ್ಬಂದಿಗಳಿಗೆ ಸರ್ಕಾರದ ಕಾರ್ಮಿಕ ಕನಿಷ್ಠ ವೇತನ ಕಾಯ್ದೆಯಂತೆ ವೇತನವನ್ನು ಪಾವತಿಸುವುದು. ಕನಿಷ್ಠ ವೇತನ ಪಾವತಿಸಲು ವಿಫಲರಾದಲ್ಲಿ ಈ ಬಗ್ಗೆ ಕಾರ್ಮಿಕ ಇಲಾಖೆ ವಿಧಿಸಬಹುದಾದ ದಂಡನೆಗಳಿಗೆ ಮಾಲಿಕರೆ ಜವಾಬ್ದಾರರಾಗಿರುತ್ತಾರೆ. **ಹಾಗೂ ತಮ್ಮ ಸಿಬ್ಬಂದಿಗಳಿಗೆ ಈ ಸಂಸ್ಥೆಯ ವತಿಯಿಂದ ಯಾವುದೇ ತರಹದ ಆರ್ಥಿಕ ಸೌಲಭ್ಯವಾಗಲೀ ಅಥವಾ ಇನ್ನಿತರೆ ಸೌಲಭ್ಯಗಳಾಗಲೀ ಇರುವುದಿಲ್ಲ.**

16. ಸೈಕಲ್ ನಿಲ್ದಾಣಕ್ಕೆ ನೇಮಕವಾದ ನೌಕರರು ಯಾವುದೆ ಕ್ರಿಮಿನಲ್ ಹಿನ್ನಲೆ ಹೊಂದಿರುತಕ್ಕದ್ದಲ್ಲ.

17. ವಾಹನ ನಿಲ್ದಾಣದ ನಿರ್ವಹಣೆಗೆ ನೇಮಿಸಿಕೊಳ್ಳುವ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಗುರುತಿನ ಚೀಟಿ ನೀಡಬೇಕು.

18. ಟೆಂಡದಾರರರು ವರ್ಷದ ಎಲ್ಲಾ ದಿನಗಳಲ್ಲಿ ಕಾರ್ಯಾ ನಿರ್ವಹಿಸುವ್ವದು.

19. ನಿಗಧಿ ಪಡಿಸಿದ ವಾಹನ ನಿಲ್ದಾಣದಲ್ಲಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಿಂದ ಸುಚಿತ್ವವಾಗಿ ಇಟ್ಟುಕೊಳ್ಳಬೇಕು. ಹಾಗೂ ಯಾವುದೇ ತರಹದ ಅನೈತಿಕ ಚಟುವಟಿಕೆಗಳನ್ನು ನಡೆಸದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಇಂತಹ ಪ್ರಕರಣಗಳು ಕಂಡುಬಂದರೆ, ನಿರ್ದೇಶಕರು ಸಿಮ್ಸ್ ಇವರು ಗುತ್ತಿಗೆದಾರನ ತಿಳುವಳಿಕೆ ಇಲ್ಲದೇ ತಕ್ಷಣ ವಜಾ ಮಾಡಿ

ಗುತ್ತಿಗೆದಾರನು ಪಾವತಿ ಮಾಡಿರುವ ಪ್ರಾರಂಭಿಕ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.

20. ವಾಹನ ನಿಲ್ದಾಣದಲ್ಲಿ ಅಕಸ್ಮಿಕವಾಗಿ ಬೆಂಕಿ ಅವಗಡ ಸಂಭವಿಸಿದಲ್ಲಿ ವಾಹನ ನಿಲ್ದಾಣ ಗುತ್ತಿಗೆದಾರರೆ ವಾಹನ ಮಾಲೀಕ ಸಂಪೂರ್ಣ ಜವಾಬ್ದಾರಾಗಿರುತ್ತಾರೆ ಇದಕ್ಕಾಗಿ ಸೂಕ್ತ ವಿಮಾ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.
21. ವಾಹನ ನಿಲ್ದಾಣದಲ್ಲಿ ವಾಹನಗಳ ವಹಿಯನ್ನು ನಿರ್ವಹಿಸತಕ್ಕದ್ದು.
22. ಒಂದೇ ದರ ನಮೂದಿಸಿದ ಇಬ್ಬರು ಮತ್ತು ಮೇಲ್ಪಟ್ಟ ಟೆಂಡರ್‌ದಾರರು ಸಲ್ಲಿಸಿದಲ್ಲಿ ಬಿಡ್ ಮೂಲಕ ಹೆಚ್ಚು ದರ ನಮೂದಿಸಿದಲ್ಲಿ ಒಪ್ಪಿಕೊಳ್ಳುವ ಅಥವಾ ಬಿಡುವ ಅಧಿಕಾರವು ನಿರ್ದೇಶಕರು ಸಿಮ್ಸ್ ಇವರು ಹೊಂದಿರುತ್ತಾರೆ.
23. ಸಾರ್ವಜನಿಕರಿಂದ ಯಾವುದೇ ದೂರು ಇತ್ಯಾದಿ ಬರದಿರುವಂತೆ ಕಾರ್ಯ ನಿರ್ವಹಿಸುವುದು.
24. ಗುತ್ತಿಗೆ ಅವಧಿಯು ಮೂರು ವರ್ಷದಾಗಿದ್ದು, ಕಾರ್ಯಾದೇಶ ನೀಡಿದ ದಿನದಿಂದ ಪ್ರತಿ ವರ್ಷ ದರಖಾಸ್ತು ಮೌಲ್ಯದ ಶತಾಂಶ 10 ರಷ್ಟು ಮೊತ್ತವನ್ನು ಹೆಚ್ಚಿಸಲಾಗುವುದು.( ನಿರ್ದೇಶಕರು, ಸಿಮ್ಸ್, ಇವರ ಅಂತಿಮ ತೀರ್ಮಾನದಂತೆ)
25. ಸದರಿ ಟೆಂಡರ್ ಫಾರಂನ್ನು ಈ ಕಾರ್ಯಾಲಯದಿಂದ ಕಛೇರಿಯ ಅವಧಿಯಲ್ಲಿ ಪಡೆಯಬಹುದಾಗಿದೆ. ಟೆಂಡರ್ ಅರ್ಜಿ ಫಾರಂ ಬೆಲೆ ರೂ 500/- ಪಾವತಿಸಿ ಪಡೆಯುವುದು.
26. ಟೆಂಡರ್ ಅನುಮೋಧನೆಯಾದವರು ರೂ. 100-00 ಛಾಪಾ ಕಾಗದದಲ್ಲಿ ಷರತ್ತುಗಳು ಪಾಲಿಸುವ ಬಗ್ಗೆ ಮುಚ್ಚಳಿಕೆ ಬರೆದುಕೊಡತಕ್ಕದ್ದು.
27. ಟೆಂಡರ್ ದರವನ್ನು ಅಂತಿಮವಾಗಿ ಅನುಮೋದಿಸುವ ಹಾಗೂ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದೆ.
28. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಅಂತಿಮ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರ ಈ ಕೆಳಗೆ ಸಹಿ ಮಾಡಿದವರಿಗಿರುತ್ತದೆ.

**5. ಟೆಂಡರ್‌ದಾರರು ತಾಂತ್ರಿಕ ಲಕೋಟೆಗೆ ( ಟೆಂಡರ್ ಅರ್ಜಿ ನಮೂನೆ - 1 ) ಸಲ್ಲಿಸಬೇಕಾದ ದಾಖಲೆಗಳು :**

**ಅ)** i. ID Proof with Photo.
ii. Proof of Address.
iii.PAN Card
iv. GST Registration Certificate in case of registered (Optional).
v. Experience Certificate if any (Optional).

**ಆ)** ಚಾಲ್ತಿಯಲ್ಲಿರುವ ಮೂರು ವರ್ಷಗಳ ಆದಾಯ ತೆರಿಗೆ ಪಾವತಿಸಿದ ಪ್ರಮಾಣ ಪತ್ರ/ಸಂಸ್ಥೆಯ ಹೆಸರಿನಲ್ಲಿ ರಿಟರ್ನ್ ಸಲ್ಲಿಸಿದ ದಾಖಲಾತಿಯ ಪ್ರತಿ.

**ಇ)** ಪ್ರಸ್ತುತ ವರ್ಷಕ್ಕೆ ಚಾಲ್ತಿ ಇರುವ ಕಾರ್ಮಿಕ ಇಲಾಖೆಯಲ್ಲಿ ನೊಂದಾವಣಿ ಮಾಡಿರುವ ಬಗ್ಗೆ ಪ್ರಮಾಣ ಪತ್ರದ ಪ್ರತಿ ಲಗತ್ತಿಸುವುದು.

**ಈ)** ಟೆಂಡರ್‌ದಾರರ ಕೇಂದ್ರ ಕಛೇರಿ ಅಥವಾ ಶಾಖಾ ಕಛೇರಿ ಶಿವಮೊಗ್ಗ ನಗರದಲ್ಲಿದೆಯೇ ಇವರುವ ದಾಖಲಾತಿಯ ಪ್ರತಿಯನ್ನು ಲಗತ್ತಿಸಿವುದು. ಅಥವಾ ಕೇಂದ್ರ ಸ್ಥಾನದಲ್ಲಿ ಕೇಂದ್ರ ಕಛೇರಿ ಅಥವಾ ಶಾಖಾ ಕಛೇರಿಯನ್ನು ಶಿವಮೊಗ್ಗದಲ್ಲಿ ತೆರೆಯುವ ಬಗ್ಗೆ ಧೃಢೀಕರಣ ಪತ್ರವನ್ನು ನೀಡಬೇಕು.

**ಉ)** ಚುನಾಯಿತ ಸದಸ್ಯರು, ಕಪ್ಪುಪಟ್ಟಿಯಲ್ಲಿರುವ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಟೆಂಡರ್‌ದಾರರು ಕಪ್ಪುಪಟ್ಟಿಗೆ ಸೇರಿರದೆ ಇರುವ ಬಗ್ಗೆ ಮತ್ತು ಚುನಾಯಿತ ಪ್ರತಿನಿಧಿ ಅಲ್ಲದೆ ಇರುವ ಬಗ್ಗೆ 100 ರೂ ಗಳ ಛಾಪಾ ಕಾಗದದಲ್ಲಿ ಅಫಿಡೆವಿಟ್ ಸಲ್ಲಿಸುವ್ವದು.

ಊ) ಇ.ಎಂ.ಡಿ ಬಾಬ್ತು ರೂ. 12000/-ಗಳಿಗೆ ನಿರ್ದೇಶಕರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗರವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಡಿ.ಡಿ ಸಲ್ಲಿಸಬೇಕು.

**6. ಟೆಂಡರ್ ಜೊತೆಗೆ ಸಲ್ಲಿಸಬೇಕಾದ ದಾಖಲೆಗಳು :**

ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಿದ್ದು, 1ನೇ ಲಕೋಟೆಯಲ್ಲಿ ಟೆಂಡರ್ ಅರ್ಜಿ ಮತ್ತು ದಾಖಲಾತಿ ವಿವರಗಳನ್ನು ಹಾಕಿ ಅದರ ಮೇಲೆ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ವಾಹನ ನಿಲ್ದಾಣದ ನಿರ್ವಹಣೆಗಾಗಿ ಟೆಂಡರ್‌ನ ತಾಂತ್ರಿಕ ಲಕೋಟೆ ಎಂದು ನಮೂದಿಸಬೇಕು.

**'ಆರ್ಥಿಕ ಬಿಡ್‌ಗಳನ್ನು ಪ್ರತ್ಯೇಕ ಕವರ್‌ನಲ್ಲಿ ಅಡಕವಿರಿಸಿ'** ಅದರ ಮೇಲೆ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ವಾಹನ ನಿಲ್ದಾಣದ ನಿರ್ವಹಣೆಗಾಗಿ ಟೆಂಡರ್‌ನ ಆರ್ಥಿಕ ಲಕೋಟೆ ಎಂದು ನಮೂದಿಸಬೇಕು.

**7. ಆರ್ಥಿಕ ಬಿಡ್‌ನಲ್ಲಿ ( ಟೆಂಡರ್ ಅರ್ಜಿ ನಮೂನೆ - 2 ) ಸಲ್ಲಿಸಬೇಕಾದ ವಿವರಗಳು :**

ಆರ್ಥಿಕ ಬಿಡ್‌ನಲ್ಲಿ ನಮೂದಿಸಿರುವಂತೆ ನಿಗಧಿತ ಕಾಲಂಗಳಲ್ಲಿ ಟೆಂಡರ್ ದರವನ್ನು ರೂಪಾಯಿ ಸಂಖ್ಯೆಯಲ್ಲಿ ಮತ್ತು ಅಕ್ಷರದಲ್ಲಿ ನಮೂದಿಸಿ ಸಲ್ಲಿಸಬೇಕು. ಆರ್ಥಿಕ ಟೆಂಡರ್‌ನಲ್ಲಿ ಅತೀ ಹೆಚ್ಚು ಮೌಲ್ಯವನ್ನು ನಮೂದಿಸಿದ ಟೆಂಡರ್‌ದಾರರು ಯಶಸ್ವಿ ಟೆಂಡರ್‌ದಾರರಾಗುತ್ತಾರೆ.

**8. ಟೆಂಡರ್ ದಾಖಲೆಗಳ ತಿದ್ದುಪಡಿ :**

ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕಕ್ಕೆ ಮುನ್ನ ಈ ಬಗ್ಗೆ ಇರುವ ಟೆಂಡರ್ ದಾಖಲೆಗಳನ್ನು ತಿದ್ದುಪಡಿ ಮಾಡುವ/ಬದಲಾಯಿಸುವ ಅಧಿಕಾರ ಟೆಂಡರ್ ಪ್ರಾಧಿಕಾರ ಹೊಂದಿದೆ. ಈ ರೀತಿ ಯಾವುದೇ ತಿದ್ದುಪಡಿಗಳನ್ನು ಮಾಡಿದಲ್ಲಿ ಅದನ್ನು ಸಂಬಂಧಿಸಿದ ಟೆಂಡರ್‌ದಾರರಿಗೆ ತಿಳಿಸಲಾಗುವುದು.

**9. ಇ.ಎಂ.ಡಿ ಮೊತ್ತ :**

ಟೆಂಡರ್‌ದಾರರು ಟೆಂಡರ್‌ನಲ್ಲಿ ಇ.ಎಂ.ಡಿ ಬಾಬ್ತು **ರೂ. 12000/-**ಗಳಿಗೆ ನಿರ್ದೇಶಕರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗರವರ ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಸಲ್ಲಿಸಬೇಕು.

- ಟೆಂಡರ್‌ನಲ್ಲಿ ಇ.ಎಂ.ಡಿ ಸಲ್ಲಿಸದೆ ಇರುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
- ಯಶಸ್ವಿಯಾಗದ ಟೆಂಡರ್‌ದಾರರ ಇ.ಎಂ.ಡಿ ಯನ್ನು ಯಶಸ್ವಿ ಬಿಡ್‌ದಾರರಿಗೆ ಕಾರ್ಯಾದೇಶ ನೀಡಿದ ನಂತರ ಬಡ್ಡಿ ರಹಿತವಾಗಿ ಹಿಂತಿರುಗಿಸಲಾಗುವುದು. ಯಶಸ್ವಿ ಬಿಡ್‌ದಾರರಿಗೆ ಕಾರ್ಯಾದೇಶದ ಅವಧಿಯ ಅಂತ್ಯದವರೆಗೆ ಯಾವುದೇ ಕಾರಣಕ್ಕೂ ಕಾರ್ಯಾಧಾರಿತ ಭದ್ರತಾ ಮೊತ್ತವನ್ನು ಹಿಂದಿರುಗಿಸಲಾಗುವುದಿಲ್ಲ. ಇಲಾಖೆಯಲ್ಲಿರುವ ಅವಧಿಗೆ ಇ.ಎಂ.ಡಿ ಮತ್ತು ಕಾರ್ಯಾಧಾರಿತ ಭದ್ರತಾ ನಿರ್ವಹಣಾ ಠೇವಣಿ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

**10. ಕಾರ್ಯಾಧಾರಿತ ಭದ್ರತೆ :-**

- ಪ್ರಾರಂಭಿಕ ಭದ್ರತಾ ಠೇವಣಿಯಾಗಿ ದರಖಾಸ್ತು ಮೌಲ್ಯದ ಶತಾಂಶ 10 ರಷ್ಟು ( ರೂ. **47160/-)** ಹಣವನ್ನು ನಿರ್ದೇಶಕರು, ಸಿಮ್ಸ್ ಶಿವಮೊಗ್ಗ ಈ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ. ಯನ್ನು ಕಾರ್ಯಾದೇಶ ಪಡೆದ ಏಳು(7) ದಿನಗಳ ಒಳಗಾಗಿ ಕಛೇರಿಗೆ ನೀಡುವುದು. ಇಲ್ಲದೆ ಇದ್ದಲ್ಲಿ ಇ.ಎಂ.ಡಿ ಬಾಬ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಟೆಂಡರ್ ಷರತ್ತುಗಳನ್ನು ಉಲ್ಲಂಘನೆ ಮಾಡಿದ ಸಂದರ್ಭದಲ್ಲಿ ಸಹ ಕಾರ್ಯಾದೇಶ ರದ್ದುಪಡಿಸಿ, ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**11. ಟೆಂಡರ್ ತೆರೆಯುವುದು ಮತ್ತು ಮೌಲ್ಯಮಾಪನ ಮಾಡುವುದು :-**

ಟೆಂಡರ್ ತೆರೆದು ತಾಂತ್ರಿಕವಾಗಿ ಅರ್ಹವಾಗಿರುವ ಬಿಡ್‌ದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆದು ಮೌಲ್ಯಮಾಪನ ಮಾಡಿ ನಿಯಮಾನುಸಾರ ಅರ್ಹ ಟೆಂಡರ್‌ದಾರರನ್ನು ಆಯ್ಕೆ ಮಾಡಲಾಗುವುದು.

1. ತಾಂತ್ರಿಕ ಬಿಡ್ ತೆರೆದು ಟೆಂಡರ್ ನಿಬಂಧನೆಗಳು ಮತ್ತು ಟೆಂಡರ್‌ದಾರರು ಒದಗಿಸುವ ದಾಖಲಾತಿಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಲಾಗುವುದು.
2. ಎಲ್ಲಾ ರೀತಿಯಲ್ಲೂ ಸರಿಯಾಗಿರುವ ತಾಂತ್ರಿಕ ಬಿಡ್ ಮಾತ್ರ ಒಪ್ಪಿಕೊಂಡು ಅವುಗಳಿಗೆ ಸಂಬಂಧಿಸಿದಂತೆ ಆರ್ಥಿಕ ಲಕೋಟೆಗಳನ್ನು ನಿಗಧಿತ ದಿನಾಂಕದಂದು ಹಾಜರಾಗುವ ಟೆಂಡರ್‌ದಾರರ ಸಮಕ್ಷಮದಲ್ಲಿ ತೆರೆಯಲಾಗುವುದು.

**12. ಟೆಂಡರ್ ಅವಾರ್ಡ್ ಮಾಡುವುದು :-**

1. ಆರ್ಥಿಕ ಬಿಡ್‌ನಲ್ಲಿ ಹೇಳಿರುವ ಅಂಶದ ಮೇಲೆ ಅತೀ ಹೆಚ್ಚು ಮೌಲ್ಯವನ್ನು ನಮೂದಿಸಿದ ಟೆಂಡರ್‌ದಾರರನ್ನು ಯಶಸ್ವಿ ಟೆಂಡರ್‌ದಾರರೆಂದು ಪರಿಗಣಿಸಿ ಅವರಿಗೆ ಕಾರ್ಯಾದೇಶ ನೀಡಲಾಗುವುದು, ಅವಶ್ಯವಿದ್ದಲ್ಲಿ ಈ ಹೆಚ್ಚು ಮೌಲ್ಯವನ್ನು ನಮೂದಿಸಿದ ಟೆಂಡರ್‌ದಾರರೊಡನೆ ದರ ನಿಗಧಿಗಾಗಿ ನೆಗೋಷಿಯೇಷನ್ ಮಾಡಲು ಟೆಂಡರ್ ಕರೆದಿರುವ ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.
2. ಟೆಂಡರ್‌ಗಳ ಆರ್ಥಿಕ ಲಕೋಟೆಗಳನ್ನು ತೆರೆದ ನಂತರ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಟೆಂಡರ್ ಕರೆದಿರುವ ಪ್ರಾಧಿಕಾರ ಹೊಂದಿರುತ್ತದೆ.
3. ಟೆಂಡರ್ ಅವಧಿಯು ಕಾರ್ಯಾದೇಶ ನೀಡಿದಾಗಿನಿಂದ ಮೂರು ವರ್ಷದ ಅವಧಿಗೆ ಅಥವಾ ಇಲಾಖೆ ತಿಳಿಸಿರುವ ಅವಧಿಯವರೆಗೆ ಸೇವೆ ಒದಗಿಸಬೇಕು.
4. ಟೆಂಡರ್ ಕರೆದ 90 ದಿನಗಳಲ್ಲಿ ಕಾರ್ಯಾದೇಶ ನೀಡದಿದ್ದಲ್ಲಿ ಅಥವಾ ಒಂದು ವೇಳೆ ಟೆಂಡರ್‌ದಾರರು ಲಿಖಿತ ಒಪ್ಪಿಗೆ ನೀಡಿದುದರ ಮೇರೆಗೆ ವಿಸ್ತರಿಸಿದ ಅವಧಿಯಲ್ಲಿ ಕಾರ್ಯಾದೇಶ ನೀಡದಿದ್ದಲ್ಲಿ ತಂತಾನೆ ಟೆಂಡರ್ ರದ್ದಾಗುತ್ತದೆ.

**13. ಟೆಂಡರ್ ಗುತ್ತಿಗೆಯ ಕರಾರು ಒಪ್ಪಂದವನ್ನು ಸಹಿ ಮಾಡುವುದು :**

ಯಶಸ್ವಿ ಟೆಂಡರ್‌ದಾರರಿಗೆ ಕಾರ್ಯಾದೇಶ ನೀಡಲಾಗುವುದು, ಕಾರ್ಯಾದೇಶ ಪಡೆದ ನಂತರ 7 ದಿನಗಳೊಳಗಾಗಿ ರೂ. 100/-ರ ಛಾಪಾ ಕಾಗದದಲ್ಲಿ ಇಲಾಖೆಯೊಂದಿಗೆ ನಿಗಧಿತ ನಮೂನೆಯಲ್ಲಿ ಟೆಂಡರ್ ನಿಬಂಧನೆಗಳೊಂದಿಗೆ ಹಾಗೂ ಪ್ರತ್ಯೇಕವಾಗಿ ವಿಧಿಸಬಹುದಾದ ಷರತ್ತುಗಳನ್ನೊಳಗೊಂಡ ಕರಾರು ಪತ್ರಕ್ಕೆ ಸಹಿ ಮಾಡತಕ್ಕದ್ದು. ಕರಾರು ಒಪ್ಪಂದ ಪತ್ರಕ್ಕೆ ಸಹಿ ಹಾಕಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಕಾರ್ಯಾದೇಶವನ್ನು ರದ್ದುಪಡಿಸಲಾಗುವ್ವದು.

ಸಹಿ/-
ನಿರ್ದೇಶಕರು
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಶಿವಮೊಗ್ಗ